## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಅಕ್ಷರ ದಾಸೋಹ ಕಾರ್ಯಕ್ರಮದಡಿಯ ಮಧ್ಯಾಹ್ನ ಬಿಸಿಯೂಟ ಒದಗಿಸುವ ಯೋಜನೆಯಡಿಯಲ್ಲಿ ಫಲಾನುಭವಿಗಳ ಪರಿವರ್ತನಾ ವೆಚ್ಚ ಮತ್ತು ಅಡುಗೆ ಸಿಬ್ಬಂದಿಯವರ ಮಾಸಿಕ ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ : 1. ಸನ್ಮಾನ್ಯ ಮುಖ್ಯಮಂತ್ರಿಯವರು ವಿಧಾನ ಮಂಡಲದಲ್ಲಿ ದಿನಾಂಕ : 17.07.2008ರಂದು 2008-09ನೇ ಸಾಲಿನ ಆಯವ್ಯಯ ಭಾಷಣ.

2. ಸಾರ್ವಜನಿಕ ಶಿಕ್ಷಣ ಆಯುಕ್ತರವರ ಪ್ರಸ್ತಾವನೆ ಪತ್ರದ ಸಂಖ್ಯೆಎಂ6/ಅ.ದಾ./ಅನುದಾನ 1/2008-09 ದಿನಾಂಕ : 22.07.2008.

3. ಆರ್ಥಿಕ ಇಲಾಖೆಯ ಜಿಲ್ಲಾ ವಲಯದಡಿ ಮರು ಹೊಂದಾಣಿಕೆ ಆದೇಶ ಸಂಖ್ಯೆ ಎಫ್‌ಡಿ 339 ಬಿ.ಆರ್.ಎಸ್ 2008 ದಿನಾಂಕ : 27.08.2008.

4. ಆರ್ಥಿಕ ಇಲಾಖೆಯ ರಾಜ್ಯ ವಲಯದಿಂದ ಜಿಲ್ಲಾ ವಲಯಕ್ಕೆ ಮರು ಹೊಂದಾಣಿಕೆ ಆದೇಶ ಸಂಖ್ಯೆ: ಎಫ್‌ಡಿ 340 ಬಿ.ಆರ್.ಎಸ್ 2008 ದಿನಾಂಕ : 27.08.2008.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಿರುವಂತೆ ಸನ್ಮಾನ್ಯ ಮುಖ್ಯಮಂತ್ರಿಯವರು ತಮ್ಮ ಆಯವ್ಯಯ ಭಾಷಣದಲ್ಲಿ ಈ ಕಾರ್ಯಕ್ರಮ ಕುರಿತಂತೆ "ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಅಡುಗೆ ತಯಾರಿಸುವ ವೆಚ್ಚ ಮತ್ತು ಸಿದ್ಧತಾ ಸಿಬ್ಬಂದಿಯ ಸಂಭಾವನೆಯನ್ನು ಹೆಚ್ಚಿಸಲಾಗಿದೆ. ಇದರಿಂದ ಶಾಲಾ ಮಕ್ಕಳಿಗೆ ಉತ್ತಮ ಬಿಸಿಯೂಟ ದೊರೆಯಲಿದೆ. ಇದಕ್ಕಾಗಿ 30 ಕೋಟಿ ರೂ.ಗೆ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದು" ಎಂದು ಘೋಷಿಸಿದ್ದರು.

ಮೇಲೆ (2)ರಲ್ಲಿ ಓದಲಾದ ತಮ್ಮ ಪ್ರಸ್ತಾವನೆಯಲ್ಲಿ ಸಾರ್ವಜನಿಕ ಶಿಕ್ಷಣ ಆಯುಕ್ತರು 2008-09ನೇ ಸಾಲಿನಲ್ಲಿ ತರಗತಿ 1 ರಿಂದ 7ರವರೆಗಿನ ಮಕ್ಕಳಿಗೆ ಪರಿವರ್ತನಾ ವೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ಈಗಿರುವ ರೂ.1.61 ರಿಂದ ರೂ.1.80ಕ್ಕೆ ಹಾಗೂ ತರಗತಿ 8 ರಿಂದ 10ರವರೆಗಿನ ವಿದ್ಯಾರ್ಥಿಗಳಿಗೆ ಪ್ರತಿ ದಿನಕ್ಕೆ ಈಗಿರುವ ರೂ.2.13ರಿಂದ ರೂ.2.20ಕ್ಕೆ ಏರಿಸಲು ಹಾಗೂ ಅಡುಗೆ ಕಾರ್ಯದಲ್ಲಿ ಸಹಾಯ ಮಾಡುತ್ತಿರುವ ಅಡುಗೆ ಸಿಬ್ಬಂದಿಯವರಲ್ಲಿ ಮುಖ್ಯ ಅಡುಗೆಯವರಿಗೆ ಮಾಸಿಕವಾಗಿ ರೂ.150ಕ್ಕೆ ಹೆಚ್ಚಿಸಲು ಹಾಗೂ ಇತರೇ ಅಡುಗೆಯವರಿಗೆ ತಲಾ ಮಾಸಿಕ ರೂ.100ಕ್ಕೆ ಹೆಚ್ಚಿಸಲು ಕೋರಿ ಈ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲು ಕೋರಿದ್ದಾರೆ.

ಮೇಲೆ 3 ಮತ್ತು 4 ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ ಆರ್ಥಿಕ ಇಲಾಖೆಯು ಕಾರ್ಯಕ್ರಮವು ಪ್ರತಿ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳಲು ಅಗತ್ಯವಿರುವ ಅನುದಾನವನ್ನು ಮರು ಹೊಂದಾಣಿಕೆ ಮೂಲಕ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

ಸಾರ್ವಜನಿಕ ಶಿಕ್ಷಣ ಆಯುಕ್ತರು ಸಲ್ಲಿಸಿದ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಇಡಿ 50 ಎಂಎಂಎಸ್ 2007 ಬೆಂಗಳೂರು, ದಿ: 30.08.2008

ಇಡಿ 144 ಸ್ವೀಮರ (ಯುನಿಕ್) 2008 ದಿ: 30.08.2008

'ಅಕ್ಷರ ದಾಸೋಹ' ಕಾರ್ಯಕ್ರಮದಡಿಯ ಮಧ್ಯಾಹ್ನದ ಬಿಸಿಯೂಟ ಒದಗಿಸುವ ಯೋಜನೆಯಡಿಯಲ್ಲಿ ಪರಿವರ್ತನಾ ವೆಚ್ಚವನ್ನು 1 ರಿಂದ 7ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈಗಿರುವ ಪ್ರತಿ

ದಿನಕ್ಕೆ ಪ್ರತಿ ವಿದ್ಯಾರ್ಥಿಗೆ ರೂ.1.61 ರಿಂದ ರೂ.1.80 (ಒಂದು ರೂಪಾಯಿ ಎಂಭತ್ತು ಪೈಸೆ ಮಾತ್ರ) ಮತ್ತು ತರಗತಿ 8 ರಿಂದ 10ರವರೆಗಿನ ವಿದ್ಯಾರ್ಥಿಗಳಿಗೆ ಪ್ರತಿ ದಿನಕ್ಕೆ ಪ್ರತಿ ವಿದ್ಯಾರ್ಥಿಗೆ ಈಗಿರುವ ರೂ.2.13ರಿಂದ ರೂ.2.20 (ಎರಡು ರೂಪಾಯಿ ಇಪ್ಪತ್ತು ಪೈಸೆ ಮಾತ್ರ)ಕ್ಕೆ ತತ್ ಕ್ಷಣದಿಂದ ಏರಿಸಲು ಆದೇಶಿಸಿದೆ.

ಅಕ್ಷರ ದಾಸೋಹ ಕಾರ್ಯಕ್ರಮದಡಿ ಅಡುಗೆ ಕಾರ್ಯದಲ್ಲಿ ನೆರವಾಗುತ್ತಿರುವ ಸಿಬ್ಬಂದಿಯವರ ಮಾಸಿಕ ವೇತನವನ್ನು ಈ ಕೆಳಕಂಡಂತೆ ಈಗಿನಿಂದ ಜಾರಿಗೆ ಬರುವಂತೆ ಹೆಚ್ಚಿಸಿ ಆದೇಶಿಸಿದೆ.

| | |
|---|---|
| 1) ಮುಖ್ಯ ಅಡುಗೆಯವರು | ಮಾಸಿಕ ರೂ.800 |
| 2) ಸಹಾಯಕ ಅಡುಗೆಯವರು | ಮಾಸಿಕ ರೂ.550 |
| 3) ಅಡುಗೆ ಸಹಾಯಕರು | ಮಾಸಿಕ ರೂ.500 |
| 4) ಸಹಾಯಕರು | ಮಾಸಿಕ ರೂ.400 |

ಇದಕ್ಕೆ ಸಂಬಂಧಿಸಿದ ವೆಚ್ಚವನ್ನು ಜಿಲ್ಲಾ ವಲಯ ಆಯವ್ಯಯ ಲೆಕ್ಕ ಶೀರ್ಷಿಕೆ 2202-01-800-1-35 (ಯೋಜನೆ) ಅಡಿಯಲ್ಲಿ ನಿಗದಿಪಡಿಸಿರುವ ಆಯವ್ಯಯದಡಿ ಭರಿಸತಕ್ಕದ್ದು.

ಶಾಲಾ ಮಕ್ಕಳಿಗೆ ಉತ್ತಮ ಭಿಸಿಯೂಟ ದೊರೆಯುವಂತೆ ನೋಡಿಕೊಳ್ಳಲೂ ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 63 ವೆಚ್ಚ-8/08 ದಿನಾಂಕ : 27.08.2008ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).

ಇವರಿಗೆ :

1. ಮಹಾಲೇಖಪಾಲಕರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
6. ಉಪ ನಿರ್ದೇಶಕರು, ಖಜಾನೆ ಗಣಕ ಕೇಂದ್ರ, ಖನಿಜ ಭವನ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಸನ್ಮಾನ್ಯ ಶಿಕ್ಷಣ ಸಚಿವರು (ಪ್ರಾಥಮಿಕ & ಪ್ರೌಢಶಿಕ್ಷಣ)ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 8), ವಿಧಾನ ಸೌಧ, ಬೆಂಗಳೂರು.
9. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.